# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ________ __________ ತಾಲ್ಲೂಕು.

ಸಂಕಲನಾತ್ಮಕ ಮೌಲ್ಯಮಾಪನ–1 ಸೆಪ್ಟಂಬರ್– 2023 ಅಂಕಗಳು :–40

ತರಗತಿ : 7ನೇ ವಿಷಯ : ಕನ್ನಡ ಅವಧಿ :– 90ನಿ

---

**I. ಆವರಣದಲ್ಲಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ :–** $4\times1=4$

1. ರಾಮು ಏಳನೆಯ ತರಗತಿ ವಿದ್ಯಾರ್ಥಿ (ಅಂಕಿತನಾಮ ಗುರ್ತಿಸಿ ಬರೆಯಿರಿ)
2. ಅಕ್ಕಿ ಹಕ್ಕಿಯನ್ನು ತಿನ್ನುತ್ತಿದೆ. (ವಾಕ್ಯದಲ್ಲಿರುವ ತಪ್ಪನ್ನು ಸರಿಪಡಿಸಿ ಬರೆಯಿರಿ)
3. ಅರುಣೋದಯ (ಸಂಧಿ ಬಿಡಿಸಿ ಬರೆಯಿರಿ)
4. ಕಮಲ <u>ಮನೆಗೆ</u> ಹೋದಳು (ಗೆರೆ ಎಳೆದಿರುವ ಪದದ ವಿಭಕ್ತಿ ಪ್ರತ್ಯಯ ಬರೆಯಿರಿ)

**II. ಬಿಟ್ಟ ಸ್ಥಳ ತುಂಬಿರಿ:–** $4\times1=4$

5. ಹಿಲ್ಟನ್ ಹೆಡ್ ದ್ವೀಪ________________ಸಾಗರದಲ್ಲಿದೆ.
6. ಜೇಡರ ದಾಸಿಮಯ್ಯನವರ ಅಂಕಿತನಾಮ _______
7. 'ಸ್ವಾತಂತ್ರ್ಯ ಸ್ವರ್ಗ' ಪದ್ಯ ಬರೆದ ಕವಿ _____
8. ಹಾಲಪ್ಪನ ಕಾಲನ್ನು _______ಕಚ್ಚಿತು.

**III. ಕೊಟ್ಟಿರುವ ಪದ್ಯ ಪೂರ್ಣಗೊಳಿಸಿ** $1\times2=2$

9. ಎಲ್ಲಿ ಭೂರಮೆ________________

________________________

________________________

________________________ಕಳೆವಳೋ?.

**IV. ಕೆಳಗೆ ನೀಡಿರುವ ನುಡಿಗಟ್ಟನ್ನು ಬಳಸಿ ವಾಕ್ಯ ರಚಿಸಿ** $2\times1=2$

10. ತಲೆದೂಗು
11. ಮುಖ ಅರಳು

**V. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೇ ವಾಕ್ಯಗಳಲ್ಲಿ ಉತ್ತರಿಸಿ :–** $4\times1=4$

12. ಜಿಂಕೆಯ ಕುತ್ತಿಗೆಯಲ್ಲಿ ಏನಿತ್ತು?
13. ಹಿಲ್ಟನ್ ಹೆಡ್‌ನಲ್ಲಿರುವ ಸ್ಮಾರಕ ಯಾವುದು?
14. ಪ್ರಾಣಿ–ಪ್ರಾಣಿಗಳ ನಡುವೆ ಯಾವುದಕ್ಕಾಗಿ ಸ್ಪರ್ಧೆ ನಡೆಯುತ್ತದೆ?
15. ಚಪ್ಪರದ ನಡುವೆ ತಾಯಿ ಯಾವ ಆಟ ಆಡುತ್ತಾಳೆ?

**VI. ಕೊಟ್ಟಿರುವ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ :–** $6\times2=12$

16. ಸ್ವಾತಂತ್ರ್ಯ ಸ್ವರ್ಗ ಪದ್ಯದಲ್ಲಿ ಕವಿಯು ಬಾಳು ಹೇಗಿರಬೇಕೆಂದು ಆಶಿಸಿದ್ದಾರೆ?
17. ಮಕ್ಕಳು ಸಸಿ ಕಿತ್ತ ಬಗೆಯನ್ನು ನಿಮ್ಮ ಮಾತುಗಳಲ್ಲಿ ವ್ಯಕ್ತಪಡಿಸಿ?
18. ಸರೋವರ, ಕೆರೆ ಮತ್ತು ಹೊಂಡಗಳು ಬೇರೆ ಕೆಲಸಕ್ಕೆ ಬಳಕೆಯಾಗುತ್ತಿವೆ, ಏಕೆ?
19. ತವರು ಮನೆ ನೋಡಲು ಹೇಗಿದೆ?
20. ಶಿವ ತನ್ನ ಭಕ್ತರನ್ನು ಹೇಗೆ ಪರೀಕ್ಷಿಸುತ್ತಾನೆ ನಿಮ್ಮ ಮಾತುಗಳಲ್ಲಿ ಬರೆಯಿರಿ.
21. ಹಿಲ್ಟನ್ ಹೆಡ್‌ನ ಸ್ಮಾರಕದ ಬಗ್ಗೆ ವಿವರಿಸಿ.

**VII. ಸಂದರ್ಭ ಸಹಿತ ವಿವರಿಸಿ** $2\times2=4$

22. "ಏಯ್ ಯುವಕ ಈ ಜಿಂಕೆ ನನ್ನ ಆಹಾರ"
23. "ತೋರಿಸು ಬಾರೇ ತವರೂರ"

**VIII. ಕೊಟ್ಟಿರುವ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ :–** $2\times4=8$

24. ಕಾಡನ್ನು ನಾಶ ಮಾಡುವುದರಿಂದ ಆಗುವ ದುಷ್ಪರಿಣಾಮಗಳೇನು?
25. "ಸೀನ ಶೆಟ್ಟರು ನಮ್ಮ ಟೀಚರ್" ಈ ಗದ್ಯ ಭಾಗದಲ್ಲಿ ನೀನು ಮೆಚ್ಚಿದ ಅಂಶಗಳಾವುವು?

**1. ಘಟಕಾವಾರು ಅಂಕ ಹಂಚಿಕೆ** **7th 1st sem ಕನ್ನಡ** **2. ಉದ್ದೇಶವಾರು ಅಂಕ ಹಂಚಿಕೆ**

| ಕ್ರ. ಸಂ | ಘಟಕ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು | 2 | 3 | 7.5% |
| 2 | ಸೀನಶೆಟ್ಟರು ನಮ್ಮ ಟೀಚರು | 3 | 7 | 17.5% |
| 3 | ಹಿಲ್ಲನ್‌ಹೆಡ್ ಚಳವಳಿ | 3 | 4 | 10% |
| 4 | ಪರಿಸರ ಸಮತೋಲನ | 3 | 7 | 17.5% |
| 5 | ಹುತ್ತರಿ ಹಾಡು | 1 | 2 | 5% |
| 6 | ಸ್ವಾತಂತ್ರ್ಯ ಸ್ವರ್ಗ | 2 | 3 | 7.5% |
| 7 | ಭಾಗ್ಯದ ಬಳೆಗಾರ | 3 | 5 | 12.5% |
| 8 | ವಚನಗಳ ಭಾವಸಂಗಮ | 2 | 3 | 7.5% |
| 9 | ವ್ಯಾಕರಣ | 6 | 6 | 15% |
| | | | | |
| | | | | |
| | | | | |
| | | | | |
| | | | | |
| | ಒಟ್ಟು | 25 | 40 | 100% |

| ಕ್ರ.ಸಂ | ಉದ್ದೇಶಗಳು | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಜ್ಞಾನ | 10 | 10 | 25% |
| 2 | ತಿಳಿವಳಿಕೆ | 8 | 14 | 35% |
| 3 | ಅಭಿವ್ಯಕ್ತಿ /ಅನ್ವಯ | 6 | 12 | 30% |
| 4 | ಪ್ರಶಂಸೆ / ಕೌಶಲ | 1 | 4 | 10% |
| | ಒಟ್ಟು | 25 | 40 | 100% |

**3. ಪ್ರಶ್ನಾವಾರು ಅಂಕ ಹಂಚಿಕೆ**

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ವಸ್ತುನಿಷ್ಠ ಪ್ರಶ್ನೆ | 8 | 8 | 20% |
| 2 | ಕಿರು ಉತ್ತರ ಪ್ರಶ್ನೆ | 15 | 24 | 60% |
| 3 | ದೀರ್ಘ ಉ. ಪ್ರಶ್ನೆ | 2 | 8 | 20% |
| | ಒಟ್ಟು | 25 | 40 | 100% |

**4. ಕಠಿಣತಾವಾರು ಅಂಕ ಹಂಚಿಕೆ**

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಸರಳ | 8 | 8 | 20% |
| 2 | ಸಾಧಾರಣ | 15 | 24 | 60% |
| 3 | ಕಠಿಣ | 2 | 8 | 20% |
| | ಒಟ್ಟು | 25 | 40 | 100% |

# ನೀಲನಕಾಶೆ

| ಕ್ರ. ಸಂ | ಉದ್ದೇಶಗಳು ಘಟಕಗಳು | ಜ್ಞಾನ | | | ತಿಳಿವಳಿಕೆ | | | ಅಭಿವ್ಯಕ್ತಿ/ಅನ್ವಯ | | | ಪ್ರಶಂಸೆ/ಕೌಶಲ | | | ಒಟ್ಟು | |
|---|---|---|---|---|---|---|---|---|---|---|---|---|---|---|---|
| | | ವ. | ಕಿ. | ದೀ. | ವ. | ಕಿ. | ದೀ. | ವ. | ಕಿ. | ದೀ. | ವ. | ಕಿ. | ದೀ. | ಪ್ರಶ್ನೆ | ಅಂಕ |
| 1 | ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು | 1(1) | | | | 1(2) | | | | | | | | 2 | 3 |
| 2 | ಸೀನಶೆಟ್ಟರು ನಮ್ಮ ಟೀಚರು | 1(1) | | | | | | | 1(2) | | | | 1(4) | 3 | 7 |
| 3 | ಹಿಲ್ಲನ್‌ಹೆಡ್ ಚಳವಳಿ | 1(1)<br>1(1) | | | | | | | 1(2) | | | | | 3 | 4 |
| 4 | ಪರಿಸರ ಸಮತೋಲನ | 1(1) | | | | 1(2) | | | | 1(4) | | | | 3 | 7 |
| 5 | ಹುತ್ತರಿ ಹಾಡು | | | | | 1(2) | | | | | | | | 1 | 2 |
| 6 | ಸ್ವಾತಂತ್ರ್ಯ ಸ್ವರ್ಗ | 1(1) | | | | 1(2) | | | | | | | | 2 | 3 |
| 7 | ಭಾಗ್ಯದ ಬಳೆಗಾರ | 1(1) | | | | 1(2)<br>1(2) | | | | | | | | 3 | 5 |
| 8 | ವಚನಗಳ ಭಾವಸಂಗಮ | 1(1) | | | | | | | 1(2) | | | | | 2 | 3 |
| 9 | ವ್ಯಾಕರಣ | 1(1)<br>1(1) | | | 1(1)<br>1(1) | | | 1(1)<br>1(1) | | | | | | 6 | 6 |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |
| | | **6(6)** | **4(4)** | | **2(2)** | **6(12)** | | | **5(8)** | **1(4)** | | | **1(4)** | **25** | |
| | **ಒಟ್ಟು** | **10(10)** | | | **8(14)** | | | **6(12)** | | | **1(4)** | | | | **40** |

**ಸೂಚನೆ :–** 1.ವ= ವಸ್ತುನಿಷ್ಟ ಪ್ರಶ್ನೆ, ಕಿ= ಕಿರುಉತ್ತರ ಪ್ರಶ್ನೆ, ದೀ= ದೀರ್ಘ ಉತ್ತರ ಪ್ರಶ್ನೆ 2.ಪ್ರಶ್ನೆ(ಅಂಕ)

ತರಗತಿ:7 ಪ್ರಶ್ನಾವಾರು ವಿಶ್ಲೇಷಣೆ ವಿಷಯ :ಕನ್ನಡ

| ಪ್ರಶ್ನೆ ಸಂ. | ಘಟಕ | ಉದ್ದಿಷ್ಟ | ನಿರ್ದಿಷ್ಟ | ಅಂಕ | ಪ್ರಶ್ನೆಯ ರೂಪ | ಕ್ಲಿಷ್ಟತೆ | ಸಮಯ |
|---|---|---|---|---|---|---|---|
| 1 | ವ್ಯಾಕರಣ | ಜ್ಞಾನ | ಗುರ್ತಿಸುವುದು | 1 | ವಸ್ತುನಿಷ್ಠ | ಸುಲಭ | 2 |
| 2 | ವ್ಯಾಕರಣ | ಗ್ರಹಿಕೆ | ಸರಿಪಡಿಸುವುದು | 1 | ವಸ್ತುನಿಷ್ಠ | ಸುಲಭ | 2 |
| 3 | ವ್ಯಾಕರಣ | ಗ್ರಹಿಕೆ | ಬಿಡಿಸುವುದು | 1 | ವಸ್ತುನಿಷ್ಠ | ಸುಲಭ | 2 |
| 4 | ವ್ಯಾಕರಣ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 5 | ಹಿಲ್ಬನ್ ಹೆಡ್ ಚಳವಳಿ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 6 | ವಚನಗಳ ಭಾವಸಂಗಮ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 7 | ಸ್ವಾತಂತ್ರ್ಯ ಸ್ವರ್ಗ | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 8 | ಸೀನಶೆಟ್ಟರು ನಮ್ಮ ಟೀಚರು | ಜ್ಞಾನ | ಸ್ಮರಿಸುತ್ತಾನೆ | 1 | ವಸ್ತುನಿಷ್ಠ | ಸುಲಭ | 2 |
| 9 | ಹುತ್ತರಿ ಹಾಡು | ಗ್ರಹಿಕೆ | ಬರೆಯುವುದು | 2 | ಕಿರುಉತ್ತರ | ಸಾಧಾರಣ | 4 |
| 10 | ವ್ಯಾಕರಣ | ಅಭಿವ್ಯಕ್ತಿ | ಸ್ವಂತ ವಾಕ್ಯ ರಚಿಸುತ್ತಾನೆ | 1 | ಕಿರುಉತ್ತರ | ಸಾಧಾರಣ | 2 |
| 11 | ವ್ಯಾಕರಣ | ಅಭಿವ್ಯಕ್ತಿ | ಸ್ವಂತ ವಾಕ್ಯ ರಚಿಸುತ್ತಾನೆ | 1 | ಕಿರುಉತ್ತರ | ಸಾಧಾರಣ | 2 |
| 12 | ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು | ಜ್ಞಾನ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸಾಧಾರಣ | 3 |
| 13 | ಹಿಲ್ಬನ್ ಹೆಡ್ ಚಳವಳಿ | ಜ್ಞಾನ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸಾಧಾರಣ | 3 |
| 14 | ಪರಿಸರ ಸಮತೋಲನ | ಜ್ಞಾನ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸಾಧಾರಣ | 3 |
| 15 | ಭಾಗ್ಯದ ಬಳೆಗಾರ | ಜ್ಞಾನ | ಸ್ಮರಿಸುತ್ತಾನೆ | 1 | ಕಿರುಉತ್ತರ | ಸಾಧಾರಣ | 3 |
| 16 | ಸ್ವಾತಂತ್ರ್ಯ ಸ್ವರ್ಗ | ಗ್ರಹಿಕೆ | ಬರೆಯುತ್ತಾನೆ | 2 | ಕಿರುಉತ್ತರ | ಸಾಧಾರಣ | 5 |
| 17 | ಸೀನಶೆಟ್ಟರು ನಮ್ಮ ಟೀಚರು | ಅಭಿವ್ಯಕ್ತಿ | ಸ್ವಂತ ಮಾತುಗಳಲ್ಲಿ ಬರೆಯುವುದು | 2 | ಕಿರುಉತ್ತರ | ಸಾಧಾರಣ | 5 |
| 18 | ಪರಿಸರ ಸಮತೋಲನ | ಗ್ರಹಿಕೆ | ಬರೆಯುತ್ತಾನೆ | 2 | ಕಿರುಉತ್ತರ | ಸಾಧಾರಣ | 5 |
| 19 | ಭಾಗ್ಯದ ಬಳೆಗಾರ | ಗ್ರಹಿಕೆ | ಸ್ಮರಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 5 |
| 20 | ವಚನಗಳ ಭಾವಸಂಗಮ | ಅಭಿವ್ಯಕ್ತಿ | ಸ್ವಂತ ಮಾತುಗಳಲ್ಲಿ ಬರೆಯುವುದು | 2 | ಕಿರುಉತ್ತರ | ಸಾಧಾರಣ | 5 |
| 21 | ಹಿಲ್ಬನ್ ಹೆಡ್ ಚಳವಳಿ | ಅಭಿವ್ಯಕ್ತಿ | ಸ್ವಂತ ಮಾತುಗಳಲ್ಲಿ ಬರೆಯುವುದು | 2 | ಕಿರುಉತ್ತರ | ಸಾಧಾರಣ | 5 |
| 22 | ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು | ಗ್ರಹಿಕೆ | ಸಂಗ್ರಹಿಸಿ ಬರೆಯುವುದು | 2 | ಕಿರುಉತ್ತರ | ಸಾಧಾರಣ | 5 |
| 23 | ಭಾಗ್ಯದ ಬಳೆಗಾರ | ಗ್ರಹಿಕೆ | ಸಂಗ್ರಹಿಸಿ ಬರೆಯುವುದು | 2 | ಕಿರುಉತ್ತರ | ಸಾಧಾರಣ | 5 |
| 24 | ಪರಿಸರ ಸಮತೋಲನ | ಅಭಿವ್ಯಕ್ತಿ | ವಿವರಿಸುವುದು | 4 | ದೀರ್ಘಉತ್ತರ | ಕಠಿಣ | 7 |
| 25 | ಸೀನಶೆಟ್ಟರು ನಮ್ಮ ಟೀಚರು | ಪ್ರಶಂಸೆ | ಮೆಚ್ಚುವನು | 4 | ದೀರ್ಘಉತ್ತರ | ಕಠಿಣ | 7 |

# ಮಾದರಿ ಉತ್ತರ ಪತ್ರಿಕೆ

ಸಂಕಲನಾತ್ಮಕ ಮೌಲ್ಯಮಾಪನ–1 ಸೆಪ್ಟಂಬರ್– 2023 ಅಂಕಗಳು :–40

ತರಗತಿ : 7ನೇ ವಿಷಯ : ಕನ್ನಡ ಅವಧಿ :– 90ನಿ

1. ರಾಮು
2. ಹಕ್ಕಿ ಅಕ್ಕಿಯನ್ನು ತಿನ್ನುತ್ತಿದೆ.
3. ಅರುಣ+ಉದಯ
4. ಚತುರ್ಥಿ
5. ಅಟ್ಲಾಂಟಿಕ್
6. ರಾಮನಾಥ
7. ಎಂ.ಅಕಬರ ಅಲಿ
8. ಹಾವು
9. ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ?
   ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ?
   ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ?
   ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆಕಳೆ ಕಳೆವಳೋ?
10. ತಲೆದೂಗು:ಯಕ್ಷಗಾನ ಪಾತ್ರಧಾರಿತ ಕುಣಿತ ಕಂಡು ಪ್ರೇಕ್ಷಕರು ತಲೆದೂಗಿದರು.
11. ಮುಖ ಅರಳು :ತಾಯಿಯನ್ನು ಕಾಣುತ್ತಲೇ ಮಗುವಿನ ಮುಖ ಅರಳಿತು.
12. ಜಿಂಕೆಯ ಕುತ್ತಿಗೆಯಲ್ಲಿ ಗೆಜ್ಜೆ ಇತ್ತು.
13. ಹಿಲ್ವನ್ ಹೆಡ್‌ನಲ್ಲಿರುವ ಸ್ಮಾರಕ ಲಿಬರ್ಟಿ ಓಕ್ ಮರ.
14. ಪ್ರಾಣಿ–ಪ್ರಾಣಿಗಳ ನಡುವೆ ಆಹಾರ ಆಚ್ಛಾದನಗಳಿಗಾಗಿ ಸ್ಪರ್ಧೆ ನಡೆಯುತ್ತದೆ.
15. ಚಪ್ಪರದ ನಡುವೆ ತಾಯಿ ಪಗಡೆ ಆಟ ಆಡುತ್ತಾಳೆ.
16. ಮನುಷ್ಯರು ಸಂಕುಚಿತ ಮನೋಭಾವನೆಯನ್ನು ಬಿಟ್ಟು ವಿಶ್ವಮಾನವರಾಗಿ ಬಾಳಬೇಕೆಂದು ಕವಿಯು ಆಶಿಸಿದ್ದಾರೆ.
17. ಮೊದಮೊದಲು ಮಕ್ಕಳಿಗೆ ಹಿಡಿ ತುಂಬಾ ಸಸಿಗಳನ್ನು ಬುಡಸಮೇತ ಕೀಳುವುದು ಸುಲಭವಾಗಲಿಲ್ಲ. ಅನೇಕ ಸಸಿಗಳನ್ನು ಹಾಳು ಮಾಡಿದರು. ಹತ್ತಾರು ಬಾರಿ ಕಿತ್ತು ಕಿತ್ತು ಪ್ರಯತ್ನಿಸಿ ಅನಂತರ ಅವರಿಗೆ ಕೀಳುವುದು ಅಭ್ಯಾಸವಾಗಿ ವೇಗವೂ ಹಿಡಿಯಿತು.
18. ಸರೋವರ , ಕೆರೆ ಮತ್ತು ಹೊಂಡಗಳು ಬೇರೆ ಕೆಲಸಕ್ಕೆ ಬಳಕೆಯಾಗುತ್ತಿರುವುದಕ್ಕೆ ಕಾರಣ ವಿಮಾನ , ರೈಲ್ವೆ ಮತ್ತು ನಿರ್ಮಾಣಕ್ಕಾಗಿ ಅವುಗಳನ್ನು ಮುಚ್ಚುತ್ತಿದ್ದಾರೆ.ಆದರೆ ಇದರಿಂದ ಆಗುವ ಅಸಮತೋಲನದ ಅರಿವಿಲ್ಲ.
19. ತವರು ಮನೆಯಲ್ಲಿ ಆಲೆ ಆಡುತ್ತಿರುತ್ತದೆ, ಗಾಣ ತಿರುಗುತ್ತಿರುತ್ತದೆ. ಹಂಚಿನ ಮನೆ , ಕಂಚಿನ ಬಾಗಿಲನ್ನು ಹೊಂದಿದೆ. ಮನೆಯ ಮುಂದೆ ಚಪ್ಪರ ಹಾಕಿರುತ್ತದೆ. ಚಪ್ಪರದ ಕೆಳಗೆ ತಾಯಿ ಕುಳಿತು ಪಗಡೆಯಾಡುತ್ತಿರುತ್ತಾಳೆ, ಹೀಗೆ ತವರು ಮನೆ ನೋಡಲು ಹಿತಕರವಾಗಿರುತ್ತದೆ.
20. ಜೇಡರ ದಾಸಿಮಯ್ಯನು ಪರಮ ಶಿವಭಕ್ತ ಶಿವನು ತನ್ನ ಭಕ್ತರ ನಾನಾ ವಿಧಗಳಲ್ಲಿ ಪರೀಕ್ಷಿಸುತ್ತಾನೆ ಎಂದರೆ ಕಷ್ಟಕೊಟ್ಟು ಭಿಕ್ಷೆ ಬೇಡುವಂತೆ ಮಾಡುತ್ತಾನೆ . ಚಿನ್ನವನ್ನು ಪರೀಕ್ಷಿಸುವಂತೆ ಉಜ್ಜಿ ನೋಡುತ್ತಾನೆ . ಚಂದನದಂತೆ ಅರೆಯುತ್ತಾನೆ . ಕಬ್ಬಿನ ಕೋಲಿನಂತೆ ಕತ್ತರಿಸಿ ಹಿಂಡುತ್ತಾನೆ . ಇವೆಲ್ಲಕ್ಕೂ ಹೆದರದೆ ಇದ್ದರೆ ತಾನಿದ್ದೇನೆ ಎಂದು ಬಂದು ಕೈಹಿಡಿದು ಕಾಪಾಡುತ್ತಾನೆ .
21. ಅದು ಲಿಬರ್ಟಿ ಓಕ್ ಮರ. ಐವತ್ತರ ದಶಕದಲ್ಲಿ ಪರಿಸರ ರಕ್ಷಣೆಗಾಗಿ ಜನ ಒಗ್ಗೂಡಿ ಪಣತೊಟ್ಟಿದ್ದು ಈ ಮರದಲ್ಲಿಯೇ. ಇದು ಸಂರಕ್ಷಿತ ಜಾಗ. 'ದಯವಿಟ್ಟು ಕಟ–ಕಟೆಯ ಒಳಗೆ ಪ್ರವೇಶ ಬೇಡಿ' ಎನ್ನುವ ಫಲಕವನ್ನು ನೆಟ್ಟಿದ್ದಾರೆ. ನಂತರ ಈ ಮರದ ಸಾನಿಧ್ಯ ಎಷ್ಟು ಪ್ರಸಿದ್ಧವಾಯಿತು ಎಂದರೆ ಎಷ್ಟೋ ವಿವಾಹಗಳಾಗಿವೆ ಎಂದು ಲೇಖಕರು ಹೇಳುತಾರೆ.
22. "ಈ ವಾಕ್ಯವನ್ನು ಡಾ ನಾರ್ಬಟ್ ಡಿಸೋಜರವರು ಬರೆದಿರುವ ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು ಎಂಬ ಗದ್ಯಭಾಗದಿಂದ ಆರಿಸಲಾಗಿದೆ ಈ ಮಾತನ್ನು ಹುಲಿಯು ಯುವಕನಿಗೆ ಜಿಂಕೆಯನ್ನು ಅಟ್ಟಿಸಿಕೊಂಡು ಬಂದ ಸಂದರ್ಭದಲ್ಲಿ ಹೇಳಿತು.
23. ಈ ವಾಕ್ಯವನ್ನು ಭಾಗ್ಯದ ಬಳೆಗಾರ ಎಂಬ ಜನಪದ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ ಈ ಮಾತನ್ನು ಬಳೆಗಾರ ಮುತ್ತೈದೆ ಹೆಂಗಸಿಗೆ ಆಕೆಯು ತವರಿಗೆ ಹೋಗಿ ಬಾ ಎಂದು ಕೇಳಿಕೊಂಡ ಸಂದರ್ಭದಲ್ಲಿ ಹೇಳಿದನು.
24. ಕಾಡನ್ನು ನಾಶ ಮಾಡುವುದರಿಂದ ಅಲ್ಲಿದ್ದ ಹಕ್ಕಿ ಪಕ್ಷಿಗಳು ಬೇರೆ ತಾಣಕ್ಕೆ ಹೋಗಬೇಕಾಗುತ್ತದೆ . ಮೇವು ಇಲ್ಲದ್ದರಿಂದ ಚಿಗರೆಗಳು ಮಾಯವಾಗುತ್ತವೆ .ಈ ಚಿಗರೆಗಳನ್ನು ಬೇಟೆಯಾಡಿ ಜೀವಿಸಿದ್ದ ಹುಲಿ, ಚಿರತೆ ಮತ್ತು ಸಿಂಹಗಳು ನಾಶವಾಗುತ್ತದೆ. ಅವಿತುಕೊಳ್ಳಲು ಮರೆ ಇಲ್ಲದ್ದರಿಂದ ತೋಳ ಕರಡಿಗಳು ಓಡಿ ಹೋಗುತ್ತವೆ. ಹಣ್ಣುಹಂಪಲುಗಳು ಸಿಗದಿರುವುದರಿಂದ ಇಣಚಿ – ಕಣ್ಣು ಕಪ್ಪಡಿಗಳು ಬೇರೆ ಕಡೆಗೆ ಪ್ರಯಾಣ ಬೆಳೆಸುತ್ತವೆ. ಕಾಡು – ಪ್ರಾಣಿಗಳಿಗೆ ಆಹಾರ, ವಸತಿಯ ಕೊರತೆಯಿಂದ ವಿನಾಶವಾಗುತ್ತದೆ . ಕಾಡುಗಳ ಅಲಭ್ಯತೆಯಿಂದ ಮಳೆ ಕಡಿಮೆಯಾಗಿ ಅಂತರ್ಜಲ ಕಡಿಮೆಯಾಗುತ್ತದೆ. ಆಮ್ಲಜನಕದ ಕೊರತೆ ಮತ್ತು ಇಂಗಾಲದ ಡೈ ಆಕ್ಸೈಡ್ ಹೆಚ್ಚಿ ವಾಯುಮಾಲಿನ್ಯ ಉಂಟಾಗುತ್ತದೆ. ಪ್ರಕೃತಿಯ ಸಮತೋಲನ ತಪ್ಪಿ ಅಸಮತೋಲನದಿಂದ ಅನೇಕ ದುಷ್ಪರಿಣಾಮಗಳಾಗುತ್ತದೆ.
25. ವಿದ್ಯಾರ್ಥಿಯು ಮೆಚ್ಚಿದ ಅಂಶಗಳನ್ನು ಬರೆಯುತ್ತಾರೆ.